ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

ZILLA PANCHAYAT OFFICE, BELGAUM-590002

ದೂರವಾಣಿ Telephone: 0831-2407201, 0831-2407206, 0831-2431640

ಫ್ಯಾಕ್ಸ್/Fax: 0831-2429662

e-mail: ceozpbelgaum@yahoo.co

ವಿಷಯ : ಗ್ರಾಮಸ್ವರಾಜ್ ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯಡಿ ರಾಜ್ಯದ ಎಲ್ಲಾ 5629 ಗ್ರಾಮ ಪಂಚಾಯತಿಗಳಿಗೆ ಕಂಪ್ಯೂಟರ ಕುರ್ಚಿ ಮತ್ತು ಕಂಪ್ಯೂಟರ ಮೇಜುಗಳನ್ನು ಖರೀದಿಸಲು ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ: ಸರ್ಕಾರದ ಆದೇಶ ಸಂ: ಗ್ರಾಅಪ:71(3) ಗ್ರಾಸ್ವಯೋ:2013, ಬೆಂಗಳೂರು ದಿನಾಂಕ: 17-12-2013.

**ಪ್ರಸ್ತಾವನೆ :**

ಓದಲಾದ ಸರ್ಕಾರ ಆದೇಶದ ಪ್ರಕಾರ ಕರ್ನಾಟಕ ಪಂಚಾಯತ ಸಬಲೀಕರಣ ಯೋಜನೆಯಡಿ ಜಿಲ್ಲೆಯ 485 ಗ್ರಾಮ ಪಂಚಾಯತಿಗಳಿಗೆ ತಲಾ ಒಂದು ಕಂಪ್ಯೂಟರ್ ಕುರ್ಚಿ ಹಾಗೂ ಕಂಪ್ಯೂಟರ್ ಮೇಜು ಒದಗಿಸಲು ತೀರ್ಮಾನಿಸಲಾಗಿರುತ್ತದೆ. ಒಂದು ಕುರ್ಚಿ ಹಾಗೂ ಒಂದು ಮೇಜಿನ ಅಂದಾಜು ಮೊತ್ತ ರೂ. 5000/- ಗಳನ್ನು ( ಐದು ಸಾವಿರಗಳು ಮಾತ್ರ) ನಿಗದಿಪಡಿಸಲಾಗಿದ್ದು, ವಿಶ್ವಬ್ಯಾಂಕಿನ ಸಂಗ್ರಹಣಾ ನಿಯಮಗಳ ಅನುಸಾರ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ, ಗ್ರಾಮ ಪಂಚಾಯತಿಗಳು ಖರೀದಿ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆ. ಪ್ರತಿ ಗ್ರಾಮ ಪಂಚಾಯತಿಗೆ ರೂ. 5000/- ಗಳ ಟೇಬಲ ಮತ್ತು ಕುರ್ಚಿ ಖರೀದಿ ಮಾಡುವ ಸಲುವಾಗಿ ಅನುದಾನವನ್ನು ವಿನಿಯೋಗಿಸುವ ಸಂಬಂಧ ಈ ಆದೇಶ.

ಕ್ರಸಂ:ಜಿಪ/ಅಭಿವೃದ್ಧಿ/ಗ್ರಾಪಂ/ವಿವ-453/2013-14 ದಿನಾಂಕ: 25-01-2014.

## ಆದೇಶ

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಆದೇಶದೊಂದಿಗೆ ಲಗತ್ತಿಸಿದ ಅನುಬಂಧ (1) ರಲ್ಲಿ ತಿಳಿಸಿದಂತೆ ಒಟ್ಟು 485 ಗ್ರಾಮ ಪಂಚಾಯತಿಗಳಿಗೆ ತಲಾ ರೂ. 5000/- ರಂತೆ ಒಟ್ಟು ರೂ. 24,25,000/- ( ಇಪ್ಪತ್ತನಾಲ್ಕು ಲಕ್ಷ ಇಪ್ಪತ್ತೈದು ಸಾವಿರ ಮಾತ್ರ) ಸರ್ಕಾರವು ಬಿಡುಗಡೆ ಮಾಡಿರುತ್ತದೆ.ಈ ಮೊತ್ತವನ್ನು ಗ್ರಾಮಸ್ವರಾಜ್ ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯಡಿ ಜಿಲ್ಲೆಯ ಎಲ್ಲ 485 ಗ್ರಾಮ ಪಂಚಾಯತಿಗಳಿಗೆ ಕಂಪ್ಯೂಟರ ಕುರ್ಚಿ ಮತ್ತು ಕಂಪ್ಯೂಟರ ಮೇಜುಗಳನ್ನು ಖರೀದಿಸಲು ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಿರುವುದರಿಂದ ಸಂಬಂಧಪಟ್ಟ ಗ್ರಾಮ ಪಂಚಾಯತಿಯವರು ಪರಿಕರಗಳನ್ನು ಖರೀದಿಸುವ ಜವಾಬ್ದಾರಿಯನ್ನು ಗ್ರಾಮ ಪಂಚಾಯತಿಗೆ ವಹಿಸಿಕೊಡಲಾಗಿದ್ದು, ಪಂಚಾಯತ ಅಭಿವೃದ್ದಿ ಅಧಿಕಾರಿಗಳು, ವಿಶ್ವಬ್ಯಾಂಕಿನ ಸಂಗ್ರಹಣ ನಿಯಮಗಳ ಅನುಸಾರ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ವ್ಯಾಪಾರ ಪದ್ದತಿ (Shopping Method)ಮೇಲೆ ತಿಳಿಸಿದ ಅಂದಾಜು ಮೊತ್ತದಲ್ಲಿ ಪರಿಕರಗಳನ್ನು ಖರೀದಿಸಲು ಕ್ರಮವಹಿಸತಕ್ಕದ್ದು. ಸಂಗ್ರ ಹಣೆಯ ಪ್ರಕ್ರಿಯೆಯಿಂದ ಹಿಡಿದು ಖರೀದಿಗೆ ಸಂಬಂಧಿಸಿದ ಇತರೆ ಎಲ್ಲ ದಾಖಲಾತಿಗಳನ್ನು ನಿರ್ವಹಿಸತಕ್ಕದ್ದು. ಹಾಗೂ ಸ್ಥಳೀಯ ಲೆಕ್ಕ ಪರಿಶೋಧನೆಯಲ್ಲಿ ಹಾಜರಪಡಿಸತಕ್ಕದ್ದು. ಎಲ್ಲ ಪ್ರಕ್ರಿಯೆಗಳನ್ನು ದಿನಾಂಕ:14-01-2014 ಪೂರ್ಣಗೊಳಿಸಲು ಸಾಮಗ್ರಿ ಖರೀದಿಸಿದ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಗ್ರಾಮ ಸ್ವರಾಜ್ ಯೋಜನೆ ಕಚೇರಿ ಸಂ: 36, 6ನೇ ಮಹಡಿ, ಎಂ.ಎಸ್.ಐ.ಎಲ್. ಕಟ್ಟಡ , ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು ಇವರಿಗೆ ಗ್ರಾಮ ಪಂಚಾಯತವಾರು ಕ್ರೋಢಿಕರಿಸಿ ಸಲ್ಲಿಸಲು ಆದೇಶಿಸಿದೆ.

(ದೀಪ ಚೋಳನ)

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಜಿಲ್ಲಾ ಪಂಚಾಯತ ಬೆಳಗಾವಿ

ಪ್ರತಿಯನ್ನು : ನಿರ್ದೇಶಕರು, ಪಂಚಾಯತ ರಾಜ್ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು ಮತ್ತು ಮುಖ್ಯಸ್ಥರು (ಪ್ರ), ಗ್ರಾಮ ಸ್ವರಾಜ್ ಯೋಜನೆ, ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ ರಾಜ್ ಇಲಾಖೆ ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ.

ಪ್ರತಿಯನ್ನು : ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2/- ಗ್ರಾಮ ಪಂಚಾಯತಗಳಿಗೆ ಅನುದಾನವನ್ನು RTGS ಮುಖಾಂತರ ವರ್ಗಾಯಿಸತಕ್ಕದ್ದು.

ಪ್ರತಿಯನ್ನು: ಕಾರ್ಯನಿರ್ವಾಹಕ ಅಧಿಕಾರಿಗಳು,ತಾಲೂಕ ಪಂಚಾಯತ ಬೆಳಗಾವಿ,ಖಾನಾಪೂರ,ಬೈಲಹೊಂಗಲ, ಸವದತ್ತಿ,ರಾಮದುರ್ಗ,ಗೋಕಾಕ,ಚಿಕ್ಕೋಡಿ,ಹುಕ್ಕೇರಿ,ಅಥಣಿ,ರಾಯಬಾಗ, ಇವರಿಗೆ ಮಾಹಿತಿಗಾಗಿ ತಾಲೂಕ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತಿಗಳಿಂದ ಬಳಕೆ ಪ್ರಮಾಣ ಪತ್ರವನ್ನು ಪಡೆದು ಕ್ರೋಢಿಕೃತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

Acer-viv-453-13-14 Kurchi Meju anudan bidugade